ಕಾಲೇಜು ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
Department of Collegiate Education
Government of Karnataka

**ಸಂಖ್ಯೆ:** ಕಾಶಿಇ/ಮಾತಂವಿ/28/ಖಾಅಕಾಬ/2017-18.

ಕಾಲೇಜು ಶಿಕ್ಷಣ ಆಯುಕ್ತರಕಛೇರಿ
ಬೆಂಗಳೂರು, ದಿನಾಂಕ:04/08/2017.

## ಸುತ್ತೋಲೆ

ವಿಷಯ: ಕಾಲೇಜು ಶಿಕ್ಷಣ ಇಲಾಖಾವ್ಯಾಪ್ತಿಯ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

----

ಸರ್ಕಾರದ ಸುತ್ತೋಲೆ ಸಂ: ಸಿಆಸುಇ 29 ತಎಇ 2012, ದಿನಾಂಕ:04/09/2013ರಲ್ಲಿ ಬಯೋಮೆಟ್ರಿಕ್ ಪದ್ಧತಿಯು ಇಲ್ಲದೇ ಇರುವ ಕಛೇರಿಗಳಲ್ಲಿ ಅಧಿಕಾರಿ/ನೌಕರರ ಹಾಜರಾತಿಯಲ್ಲಿ ಏರುಪೇರು, ಕಛೇರಿಯ ಕಾರ್ಯನಿರ್ವಹಣೆಯಲ್ಲಿ ಹಾಗೂ ಶಿಸ್ತು/ಸಮಯ ಪಾಲನೆಯಲ್ಲಿ ಕೊರತೆ ಕಂಡುಬಂದಿರುವ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಕಛೇರಿಗಳಲ್ಲಿ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಲು ಕ್ರಮವಹಿಸಲು ತಿಳಿಸಿದ್ದ ಹಿನ್ನೆಲೆಯಲ್ಲಿ ಈಗಾಗಲೇ ಕಾಲೇಜು ಶಿಕ್ಷಣ ಇಲಾಖೆಯ ಕೇಂದ್ರ ಕಛೇರಿ, ಪ್ರಾದೇಶಿಕ ಕಚೇರಿ ಮತ್ತು ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಬಯೋಮೆಟ್ರಿಕ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗಿದೆ.

ಇಲಾಖಾವ್ಯಾಪ್ತಿಯ ಹಲವಾರು ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಬಯೋಮೆಟ್ರಿಕ್ ವ್ಯವಸ್ಥೆ ಇಲ್ಲದಿರುವುದನ್ನು ಗಮನಿಸಲಾಗಿದೆ. ಪ್ರಯುಕ್ತ ಸಂಬಂಧಿಸಿದ ಆಡಳಿತ ಮಂಡಳಿಗಳು ಸರ್ಕಾರಿ ಅನುದಾನಿತ ಕಾಲೇಜುಗಳಲ್ಲಿ ತುರ್ತಾಗಿ ಕೆಳಕಂಡ ಮಾರ್ಗಸೂಚಿಗಳನ್ವಯ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯನ್ನು ಕಡ್ಡಾಯವಾಗಿ ಅನುಷ್ಟಾನಗೊಳಿಸಲು ಸೂಚಿಸಲಾಗಿದೆ.

- ಇಲಾಖೆ/ಸರ್ಕಾರದಿಂದ ಬಯೋಮೆಟ್ರಿಕ್ ವ್ಯವಸ್ಥೆಯನ್ನು ಅನುಷ್ಟಾನಗೊಳಿಸಲು ಯಾವುದೇ ಆರ್ಥಿಕ ನೆರವನ್ನು ನೀಡಲಾಗುವುದಿಲ್ಲ.
- ಹಾಜರಾತಿ ವಹಿ, ಚಲನವಲನ ವಹಿ ಮತ್ತು ಬಯೋಮೆಟ್ರಿಕ್ ಹಾಜರಾತಿ ವಿವರಗಳನ್ನು ನಿರ್ವಹಿಸುವುದು.
- ಕೇಂದ್ರಕಛೇರಿ/ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಯಿಂದ ಕಾಲೇಜುಗಳಿಗೆ ಭೇಟಿ/ತಪಾಸಣೆ ನೀಡಿದ ಸಂಧರ್ಬದಲ್ಲಿ ಬಯೋಮೆಟ್ರಿಕ್ ಹಾಜರಾತಿಯ ವರದಿಯನ್ನು ನೀಡುವುದು.
- ಅನಧಿಕೃತವಾಗಿ ಗೈರು ಹಾಜರಾದವರ/ಯು.ಜಿ.ಸಿ.ನಿಯಮಾವಳಿಗಳನ್ವಯ ಹಾಜರಾತಿ ಇಲ್ಲದವರ/ನಿಗದಿತ ಅವಧಿಗಿಂತ ತಡವಾಗಿ ಕರ್ತವ್ಯಕ್ಕೆ ಹಾಜರಾದವರ/ಸಂಜೆ ಮುಂಚಿತವಾಗಿ ತೆರಳುತ್ತಿರುವವರ ಸಿಬ್ಬಂದಿಗಳ ಮಾಸಿಕ ಹಾಜರಾತಿ ವರದಿಯನ್ನು ಸಂಬಂಧಿಸಿದ ಪ್ರಾದೇಶಿಕ ಜಂಟಿನಿರ್ದೇಶಕರಿಗೆ ಪ್ರತಿ ಮಾಹೆ 05 ನೇ ತಾರೀಖಿನೊಳಗಾಗಿ ವರದಿಯನ್ನು ಸಲ್ಲಿಸುವುದು.
- **ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯನ್ನು ಅನುಷ್ಟಾನಗೊಳಿಸಿರುವ ಬಗ್ಗೆ ದಿನಾಂಕ:01/09/2017ರೊಳಗಾಗಿ ಸಂಬಂಧಿಸಿದ ಪ್ರಾದೇಶಿಕ ಜಂಟಿನಿರ್ದೇಶಕರ ಮೂಲಕ ವರದಿಯನ್ನು ಸಲ್ಲಿಸುವುದು.**

**ಬಯೋಮೆಟ್ರಿಕ ಹಾಜಾರಾತಿ ವರದಿಯನ್ನು ನಿಗದಿತ ದಿನಾಂಕದಲ್ಲಿ ಸಂಬಂಧಿಸಿದ ಪ್ರಾದೇಶಿಕ ಜಂಟಿನಿರ್ದೇಶಕರಿಗೆ ಸಲ್ಲಿಸುವುದರಿಂದ ಸಕಾಲದಲ್ಲಿ ವೇತನ ಪಾವತಿಗೆ ಕ್ರಮವಹಿಸಲು ಅನುಕೂಲವಾಗುವ ಹಿನ್ನೆಲೆಯಲ್ಲಿ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯನ್ನು ಕಡ್ಡಾಯವಾಗಿ ಅನುಷ್ಟಾನಗೊಳಿಸಲು ಮತ್ತೊಮ್ಮೆ ಸೂಚಿಸಲಾಗಿದೆ.**

4/8/17

**ಕಾಲೇಜು ಶಿಕ್ಷಣ ಆಯುಕ್ತರು**

ಇವರಿಗೆ

1. ಎಲ್ಲಾ ಖಾಸಗಿ ಅನುದಾನಿತ ಕಾಲೇಜುಗಳ ಆಡಳಿತ ಮಂಡಳಿಗಳಿಗೆ/ ಪ್ರಾಂಶುಪಾಲರಿಗೆ – ಸೂಕ್ತಕ್ರಮಕ್ಕಾಗಿ
2. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – ತಮ್ಮ ವ್ಯಾಪ್ತಿಯ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯು ಸಮರ್ಪಕವಾಗಿ ಅನುಷ್ಠಾನಗೊಂಡಿರುವ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸುವುದು.

ಪ್ರತಿಯನ್ನು

1. ಕಾಲೇಜು ಶಿಕ್ಷಣ ಆಯುಕ್ತರ/ನಿರ್ದೇಶಕರ/ಮುಖ್ಯ ಆಡಳಿತಾಧಿಕಾರಿಗಳ/ಹೆಚ್ಚುವರಿ ನಿರ್ದೇಶಕರ ಆಪ್ತಶಾಖೆಗೆ – ಮಾಹಿತಿಗಾಗಿ.
2. ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
3. ಕಛೇರಿ ಪ್ರತಿ.